**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 51/2017**

ದಿನಾಂಕಃ 30.10.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 20 ಪ್ರಾಸಾ - 10

| | | |
|---|---|---|
| ಹೆಸರು | ಃ | ಕೆಂಪೇಗೌಡ |
| ತಂದೆಯ/ಗಂಡನ ಹೆಸರು | ಃ | ರಂಗೇಗೌಡ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ತಿಮ್ಮಸಂದ್ರ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ.

2. ಸುಮಾರು ಒಂದು ವರ್ಷದ ಹಿಂದೆ ಪೊಲೀಸರು ನನ್ನನ್ನು ಮತ್ತು 1 ನೇ ಆರೋಪಿಯನ್ನು ವಡೇರಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಪೊಲೀಸರು ಮಹಜರ್ ಮಾಡಿದ್ದಾರೆ. ಏನೋ ಕಳ್ಳತನ ಮಾಡಿದ್ದಾರೆ ಎಂದು ಮಹಜರ್ ಮಾಡಿದ್ದಾರೆ. ಕಳ್ಳತನ ಮಾಡುವ ಸಂಬಂಧವಾಗಿ ಆರೋಪಿಗಳು ಆ ಜಾಗದಲ್ಲಿ ಕುಳಿತು ಮಾತನಾಡಿದ್ದಾರೆ ಎಂದು ಪಂಚನಾಮೆಯನ್ನು ಮಾಡಿದ್ದಾರೆ.

3. ಆ ರೀತಿ ಮಾಡಿದ ಮಹಜರ್‌ಗೆ ನಾನು ರುಜು ಮಾಡಿದ್ದೇನೆ. ಸದರಿ ಮಹಜರ್‌ನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ.

ಸದರಿ ಮಹಜರ್‌ನ್ನು ನಿಶಾನೆ ಪಿ 11 ಮತ್ತು ಸಾಕ್ಷಿಯ ರುಜುವನ್ನು ನಿಶಾನೆ ಪಿ 11(ಎ) ಎಂದು ನಿಶಾನೆ ಮಾಡಲಾಯಿತು.

4. ಆ ಮಹಜರ್ ಮಾಡುವಾಗ ಸಮಯ ಎಷ್ಟಾಗಿತ್ತು ಎಂಬುವುದು ನನಗೆ ನೆನಪಿಲ್ಲ. ರುಜು ಮಾಡುವಾಗ ನನ್ನ ಜೊತೆಯಲ್ಲಿ ಬೇರೆ ಯಾರಿದ್ದರು ಎಂಬುವುದು ನನಗೆ ನೆನಪಿಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಎಸ್.ಪಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

5. ನಾನು 1 ನೇ ಆರೋಪಿಯನ್ನು ಮಾತ್ರ ನೋಡಿದ್ದೇನೆ. ಆ ರೀತಿ ನನ್ನನ್ನು ಕರೆದುಕೊಂಡು ಹೋಗುವಾಗ 3 ಜನ ಪೊಲೀಸರು ಇದ್ದರು. ನಾನು ರುಜು ಮಾಡಿದ ಮಹಜರ್‌ನಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನನ್ನು ಎಷ್ಟು ಗಂಟೆಗೆ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾರೆ ಎನ್ನುವುದು ನನಗೆ ನೆನಪಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.